ಅ) ರೈತರ ಸುಸ್ತಿ ಸಹಕಾರ ಸಾಲಗಳಿಗೆ ಹರಾಜಾದ ಭೂಮಿಯೆನ್ನು ಸರ್ಕಾರದವರು ಖರೀದಿ ಮಾಡಿರುವ ನಿದರ್ಶನಗಳೆಷ್ಟು ? ಮತ್ತು ಅದರ ಪೊತ್ತ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

ಆ) ಸಹಕಾರ ಸಾಲಗಳ ಬಡ್ಡಿ ರಿಯಾಯಿತಿಯ ನಂತರ ರೈತ ಅಸಲನ್ನು ಬ್ಯಾಂಕಿಗೆ ಕಟ್ಟಿದ ಮೇಲೆ ಆ ಜಮೀನನ್ನು ರೈತನಿಗೆ ಪುನ: ಕೊಡುವ ಅಧಿಕಾರ ಯಾರಿಗಿದೆ ;

ಇ) ಈ ರೀತಿ ಜಮೀನನ್ನು ರೈತ ಸರ್ಕಾರದಿಂದ ಪುನ: ಸ್ವಾಧೀನ ಪಡಿಸಿ ಕೊಂಡಿರುವ ನಿದರ್ಶನಗಳೆಷ್ಟು ;

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ವಿವರಗಳನ್ನು ತಃಖ್ತೆ — 1 ರಲ್ಲಿ ನೀಡಲಾಗಿದೆ.

ಆ) ಸಹಕಾರ ಸುಸ್ತಿ ಸಾಲಗಳ ಬಡ್ಡಿ ರಿಯಾಯಿತಿ ಯೋಜನೆಯು ಈಗ ಅನುಷ್ಠಾನದಲ್ಲಿಲ್ಲ. ಹಲವು ಪರತ್ತು ಮತ್ತು ನಿಗದಿತ ವೇಳೆಗೆ ಅನುಗುಣವಾಗಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪುನ: ಜಗರ್ಾವಣೆ ಮಾಡುವ ಅಧಿಕಾರವಿರುತ್ತದೆ.

ಇ) 132.

Statement showing the details required
Under sub-question (a).

District	No. of cases	Amout (in Rupees)
1) Bangalore (City)	Nil	Nil
2) Bangalore (Rural)	Nil	Nil
3) Chitradurga	Nil	Nil
4) Shimoga	18	1,81,946.23
5) Kolar	30	2,31,933.00
6) Tumkur	3	66,038.00
7) Mysore	23	1,87,636.71
8) South Kanara	Nil	Nil
9) Hassan	34	2,68,368.00
10) Kodagu	Nil	Nil
11) Chikamagalur	4	50,707.00
12) Mandya	Nill	Nil
13) Belgaum	40	3,26,818,48
14) Dharwad	14	1,33,869,25
15 North Kanara	Nill	Nil
16) Bijapur	87	7,92,664,36
17) Gulbarga	130	10,14,709.00
18) Bidar	54	4,74,267.44
19) Bellary	286	21,99,543.73
20) Raichur	277	21,20,675.50
	1000	10,49,216.70

ವಿಷಯ.—ಕೊಳ್ಳೆಗಾಲ ತಾಲ್ಲೂಕು ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರ ಸಂಘ

ಪ್ರ. ಸಂಖ್ಯೆ 60 ಶ್ರೀ ಜಿ. ರಾಜುಗೌಡ.—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ;

ಅ) ಇತ್ತೀಚೆಗೆ ಕೊಳ್ಳೇಗಾಲದ ತಾಲ್ಲೂಕು ವ್ಯವಸಾಯ ಉತ್ಪನ್ನಗಳ ಮಾರಾಟ ಸಹಕಾರ ಸಂಘದ ಲಾರಿಯಲ್ಲಿ ಅಕ್ರಮವಾಗಿ ಅಕ್ಕಿಯನ್ನು ಸಾಗಿಸುತ್ತಿದ್ದ ಲಾರಿಯನ್ನು ಕೊಳ್ಳೇಗಾಲದ ಪೋಲೀಸಿನವರು ಹಿಡಿದಿರುವುದು ನಿಜವೇ ;

ಆ) ಸಾಗಾಣಿಕೆ ಮಾಡುತ್ತಿದ್ದ ಅಕ್ಕಿಯು ಕೊಳ್ಳೇಗಾಲದ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಕ್ಕೆ ಸೇರಿದ್ದುದೇ ಅಥವಾ ನ್ಯಾಯಬೆಲೆ ಅಂಗಡಿಗಳಿಗೆ ಸೇರಿದ್ದುದೇ ;

ಇ) ಇದರ ವ್ಯವಹಾರ ಹಾಗೂ ಸಹವಾಸದ ಬಗ್ಗೆ ಸಮಗ್ರ ತನಿಖೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ಪಿರ್ಯಾದಿಯನ್ನು ಪೋಲೀಸಿಗೆ ನೀಡಲಾಗಿದ್ದು, ಸದರಿಯವರ ಲಾರಿ ಮತ್ತು ಅಕ್ಕಿಯನ್ನು ಖಾಸಗೀ ಉಗ್ರಾಣದಿಂದ ವಶಪಡಿಸಿಕೊಂಡಿರುತ್ತಾರೆ.

ಆ) ಪೋಲೀಸಿನವರು ಮೊಕದ್ದಮೆಯನ್ನು ಹೂಡಿ ವಿಚಾರಣೆ ಮುಂದುವರಿಸಿರುತ್ತಾರೆ. ಲಾರಿ ಚಾಲಕರನ್ನು ಮತ್ತು ಸೊಸೈಟಿಯ ಕಾರ್ಯದರ್ಶಿಯವರನ್ನು ಅಮಾನತ್ತಿನಲ್ಲಿ ಇಡಲಾಗಿದೆ, ಹಾಗೂ ಕರ್ನಾಟಕ ಸಹಕಾರ ಕಾಯ್ದೆಯ ಕಲಂ 64ರ ಪ್ರಕಾರ ತನಿಖೆಗೆ ಆಜ್ಞೆ ಮಾಡಲಾಗಿದೆ.

—ಅದೆ—

ಇ) ಹಾಗೂ ಕರ್ನಾಟಕ ಸಹಕಾರ ಕಾಯ್ದೆಯ ಕಲಂ 64ರ ಪ್ರಕಾರ ತನಿಖೆಗೆ ಆಜ್ಞೆ ಮಾಡಲಾಗಿದೆ.

ವಿಷಯ :—ರಾಜ್ಯದಲ್ಲಿರುವ ಗ್ರಾಮ ಲೆಕ್ಕಿಗರ ಹುದ್ದೆಗಳು

ಪ್ರ. ಸಂಖ್ಯೆ 36 (212) ಶ್ರೀಮತಿ ಲೀಲಾದೇವಿ ಪ್ರಸಾದ್ (ಆಧಣಿ) —ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಕರ್ನಾಟಕ ವಿಧಾನ ಮಂಡಲ 1985ನೇ ಇಸವಿಯ 2ನೇ ಅಧಿವೇಶನ ವಿಧಾನಸಭಾ ಸದಸ್ಯರಾದ **ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್** ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ 213 ಕ್ಕೂ ಇ

ಉಪ ಪ್ರಶ್ನೆ 'ಆ' ಬೀದರ್, ಮೈಸೂರು ಮತ್ತು ಕೋಲಾರ ಜಿಲ್ಲೆಗಳಿಗೆ ಸಂಬಂದಿಸಿದಂತೆ ವಿವರಗಳು.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಒಟ್ಟು ಗ್ರಾಮಲೆಕ್ಕಿಗರ ಸಂಖ್ಯೆ,	ಖಾಲಿ ಇರುವ ಸಂಖ್ಯೆ.	ಯಾವ ದಿನಾಂಕದಿಂದ ಈ ಹುದ್ದೆಗಳು ಖಾಲಿ ಇವೆ	ಒಟ್ಟು ಗ್ರಾಮಲೆಕ್ಕಿಗರನ್ನು ಅಮಾನತ್ತಿನಲ್ಲಿಟ್ಟಿರುವುದು ಮತ್ತು ತೆಗೆದು ಹಾಕಿರುವುದು.	ಅಮಾನತ್ತಿನಲ್ಲಿಟ್ಟಿರುವುದು ತೆಗೆದು ಹಾಕಿರುವುದು.
1.	ಬೀದರ್	314	50	1979	15	16
2.	ಕೋಲಾರ್	511	102	1983	33	—
3.	ಮೈಸೂರು	680	148	1982	27	2